**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.2571/2022** **PW:6**

ದಿಃ **13.03.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಿಪಿ.10 ರ ಮೇಲೆ ಇರುವ ಸಹಿ ನನ್ನದು ಇದ್ದು ಸದರಿ ಸಹಿಯನ್ನು ನಿಪಿ.10(ಬಿ) ಎಂದು ಗುರುತಿಸಲಾಯಿತು. ದಿಃ 05.11.2022 ರಂದು ಮದ್ಯಾಹ್ನ 12.10 ರಿಂದ 1 ಗಂಟೆಯ ಅವಧಿಯಲ್ಲಿ ಸಹಿ ಮಾಡಿದ್ದೇನೆ. ಈ ಸಹಿಯನ್ನು ಫಿರ್ಯಾದಿಯ ಮನೆಯಲ್ಲಿ ಮಾಡಿದ್ದೇನೆ. ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರು ಈ ಸ್ಥಳವನ್ನು ತೋರಿಸಿದರು.

2. ನಿಪಿ.11 ರ ಮೇಲೆ ಇರುವ ಸಹಿ ನನ್ನದು ಇದ್ದು ಸದರಿ ಸಹಿಯನ್ನು ನಿಪಿ.11(ಬಿ) ಎಂದು ಗುರುತಿಸಲಾಯಿತು. ದಿಃ 05.11.2022 ರಂದು ಮದ್ಯಾಹ್ನ 01.10 ರಿಂದ 2 ಗಂಟೆಯ ಅವಧಿಯಲ್ಲಿ ಸಹಿ ಮಾಡಿದ್ದೇನೆ. ಈ ಸಹಿಯನ್ನು ಮಾಯಕಾರ ಕಾಲನಿ ಲೆಯೋಟನಲ್ಲಿ ಸಹಿ ಮಾಡಿದ್ದೇನೆ. ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರು ಈ ಸ್ಥಳವನ್ನು ತೋರಿಸಿ ಹಾಗೂ ನೆಕ್ಲೆಸನ್ನು ತಮ್ಮ ದೊಡ್ಡಮ್ಮನ ಕೈಗೆ ಕೊಟ್ಟಿದ್ದರು. ಸದರಿ 2 ಪಂಚನಾಮೆಗಳನ್ನು ಚಾಸಾಃ 4 ಮತ್ತು 5 ರವರ ಸಮಕ್ಷಮ ಮಾಡಿದ್ದೇನೆ.

**ಪಾಟಿಸವಾಲುಃ ಆರೋಪಿ ಪರ ಶ್ರೀ ಜಿ ಡಿ ಜೆ ವಕೀಲರಿಂದಃ**

ಘಟನಾ ಸ್ಥಳದಲ್ಲಿ ಸಾಕಷ್ಟು ಜನರು ಇರುತ್ತಾರೆ ಮತ್ತು ಜನವಸತಿ ಪ್ರದೇಶ ಎಂದರೆ ಸರಿ. ಆಜುಬಾಜು ಇದ್ದವರನ್ನು ಪಂಚನಾಮೆಗೆ ಸಾಕ್ಷಿ ಮಾಡಿಸಬೇಕಾಗಿತ್ತು ಎಂದರೆ ಸಾಕ್ಷಿ ಆಜುಬಾಜುದವರ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೂ ಮತ್ತು ಆರೋಪಿಗೂ, ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರಿಗೂ ಯಾವದೇ ಸಂಬಂದ ಇರದೇ ಇದ್ದರೂ ಸಹ ಸುಳ್ಳು ದೂರು ಸ್ವೀಕರಿಸಿ ಸುಳ್ಳು ತನಿಖೆ ಮಾಡಿ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಯೆ ಇಲ್ಲ ಎಂದರೆ

ಸರಿಯಲ್ಲ. ಪಂಚರು ಎಲ್ಲಿಯವರು ಎಂದು ಹೇಳಲು ಆಗುವುದಿಲ್ಲ. ಪಂಚರಿಗೆ ನೊಟಿಸ ಕೊಟ್ಟಿಲ್ಲ. ಪಂಚರನ್ನು ಯಾರು ಕರೆದುಕೊಂಡು ಬಂದಿಲ್ಲ. ಸ್ವತಃ ಅಲ್ಲೆ ಅವರು ಹಾಜರಿದ್ದರು. ಪಂಚನಾಮೆಯನ್ನು ನಮ್ಮ ಇಲಾಖೆಯ ರೈಟರ್ ಬರೆದಿದ್ದಾರೆ. ಸದರಿ ರೈಟರ್ ಇವರನ್ನು ಈ ಪ್ರಕರಣದಲಿಲ ಸಾಕ್ಷಿಯಾಗಿ ತೊರಿಸಿಲ್ಲ ಎಂದರೆ ಸರಿ. ನಿಪಿ.2 ಪೊಟೊವನ್ನು ನಮ್ಮ ಒಬ್ಬ ಸಿಬ್ಬಂದಿ ತೆಗೆದಿದ್ದಾರೆ. ಅವರ ಹೆಸರು ನೆನಪಿಲ್ಲ. ಅವರು ಈ ಪ್ರಕರಣದಲ್ಲಿ ಸಾಕ್ಷಿದಾರರು ಇಲ್ಲ ಎಂದರೆ ಸರಿ. ಆರೋಪಿ ಸ್ವಖುಷಿ ಹೇಳಿಕೆ ನನ್ನ ಮುಂದೆ ಕೊಟ್ಟಿಯೆ ಇಲ್ಲ ಎಂದರೆ ಸರಿಯಲ್ಲ. ಮಣಪುರಂ ಗೋಲ್ಡ ಲೋನ್ ಸಂಸ್ಥೆಯಲ್ಲಿ ಪ್ರಾರಂಬದಿಂದ ಒಳಗಡೆ ಎಲ್ಲ ಸಿಸಿಟಿವಿ ಕ್ಯಾಮೆರಾಗಳು ಇವೆ ಎಂದರೆ ಸರಿ. ಸಿಸಿಟಿವಿ ಪೊಟೇಜಗಳನ್ನು ಹಾಜರುಪಡಿಸಿಲ್ಲ. ಘಟನಗೇ ಸಂಬಂದಪಟ್ಟಂತೆ ಆರೋಪಿಯು ಮಣಪುರಂ ಗೋಲ್ಡ ಲೋನ್ ಸಂಸ್ಥೆಯಲ್ಲಿ ಯಾವದೇ ಆಬರಣವನ್ನು ಒತ್ತೆ ಇಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ.4 ರ ಪಂಚನಾಮೆಯನ್ನು ಮಣಪುರಂ ಗೋಲ್ಡ ಪೈನಾನ್ಸ ಸಂಸ್ಥೆಯಲ್ಲೆ ಮಾಡಿದ್ದೇವೆ. ಚಾಸಾಃ 4 ಮತ್ತು 5 ಎಷ್ಟು ಪ್ರಕರಣಗಳಲ್ಲಿ ಠಾಣಾ ಪಂಚರಾಗಿದ್ದಾರೆ ಎಂದರೆ ಸಾಕ್ಷಿ ನಮ್ಮಲ್ಲಿ ಬೇರೆ ಯಾವದೇ ಪ್ರಕರಣದಲ್ಲಿ ಪಂಚರಾಗಿಲ್ಲ ಎಂದು ನುಡಿಯುತ್ತಾರೆ. ಇವರಿಬ್ಬರು ಸ್ಥಳಿಕರಲ್ಲ ಎಂದರೆ ಸರಿಯಲ್ಲ. ಈ ಇಬ್ಬರು ಪಂಚರು ಘಟನಾ ಸ್ಥಳದಲ್ಲಿಯೆ ಇದ್ದರು ಅವರನ್ನು ಯಾರು ಕರೆದುಕೊಂಡು ಬಂದಿಲ್ಲ. ಆರೋಪಿಯು ಆಬರಣವನ್ನು ಮಣಪುರಂ ಗೋಲ್ಡ ಲೋನ್ ಇದರ ಸಂಸ್ಥೆಯಲ್ಲಿ ಇಟ್ಟಿದ್ದನ್ನು ನೋಡಿದರು ಅದಕ್ಕೆ ಅವರು ಪಂಚರಾಗಿ ಈ ಪ್ರಕರಣದಲ್ಲಿ ಬಂದರು. ಮೊದಲನೆ ಬಾರಿಗೆ ಇದನ್ನು ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವರಿಬ್ಬರು ನೋಡಿದ್ದರು ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚರ ಸಮಕ್ಷಮ ಘಟನಾ ಸ್ಥಳದಲ್ಲಿ ಯಾವದೇ ಪಂಚನಾಮೆ ಬರೆದಿಲ್ಲ ಹಾಗೂ ಠಾಣೆಯಲ್ಲೆ ಕುಳಿತು ಪಂಚನಾಮೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾವು ತೆಗೆದಿರುವ ಪೊಟೊಗಳಲ್ಲಿ ದಿನಾಂಕ ಮತ್ತು ಸಮಯ ಇಲ್ಲ ಎಂದರೆ ಸರಿಯಲ್ಲ. ನಿಪಿ.2 ಪೊಟೊದಲ್ಲಿ ದಿನಾಂಕ ಮತ್ತು ಸಮಯ ಇಲ್ಲ ಎಂದರೆ ಸರಿ. ನಾನು ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಪೊಟೊಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವದೇ ಹೇಳಿಕೆ ಹಾಗೂ ಮರುಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಯಾವದೇ ಸಂಬಂದ ಇರದಿದ್ದರೂ ಹಾಗೂ ಯಾವದೇ ಸಾಕ್ಷ ಆದಾರಗಳು ಇರದಿದ್ದರೂ ಸಹ ಸುಳ್ಳು ದೂರು

ಸ್ವೀಕರಿಸಿ ಸುಳ್ಳು ಪ್ರಥಮ ವರ್ತಮಾನ ವರದಿ ದಾಖಲಿಸಿ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.